ಏನೂ ಮಾತನಾಡದೆ ಬೈಕ್ ತುಳಿದ.

ಮರುದಿನ ಸುಮಾರು ನಾಲ್ಕು ಗಂಟೆಯ ಹೊತ್ತಿಗೆ, ಸರೋಜಮ್ಮನ ಮನೆಯ ಎದುರು ಎರಡು ಜೀಪುಗಳು ಬಂದು ನಿಂತವು. ಚಿಟ್ಟೆಯ ಮೇಲೆ ಹೂ ನೇಯುತ್ತಾ ಕುಳಿತಿದ್ದ ಅವಳ ಸೊಸೆಯಾಗಲೀ, ಕಟ್ಟಿಗೆ ಮನೆಯಲ್ಲಿ ಅಡಿಕೆ ಹಾಳೆಯ ಹೊರೆಯನ್ನು ಕಟ್ಟುತ್ತಿದ್ದ ಸರೋಜಮ್ಮನಾಗಲೀ ತಮ್ಮ ಕೆಲಸವನ್ನು ಬಿಟ್ಟು, ಒಂದು ಇಂಚೂ ಅಲುಗದೆ ತಮ್ಮ ತಮ್ಮ ಕಾಯಕದಲ್ಲಿಯೇ ಮುಳುಗಿದ್ದರು. ಅಬಕಾರಿಯ ಜೀಪು ಮಾತ್ರವಲ್ಲದೆ ಪೊಲೀಸರ ಜೀಪೂ ಮನೆಯ ಮುಂದೆ ನಿಂತಿದ್ದರೂ ಕ್ಯಾರೇ ಅನ್ನದ ಈ ಹೆಂಗಸರನ್ನು ನೋಡಿದ ಜೀಪಿನಲ್ಲಿದ್ದವರು, ಇವರಿಬ್ಬರೂ ಏನೋ ಹುನ್ನಾರು ಹಾಕಿದ್ದಾರೆಂದು ಊಹಿಸದಷ್ಟು ಮುಗ್ಧರಾಗಿರಲಿಲ್ಲ. ಅದಕ್ಕಾಗಿಯೇ ತಮ್ಮ ಮುಂದಿನ ಹೆಜ್ಜೆಯನ್ನೂ ಸ್ವಲ್ಪ ಎಚ್ಚರದಿಂದಲೇ ಇಡಲು ನಿರ್ಧರಿಸಿದಂತೆ ಕಾಣುತ್ತಿತ್ತು. ಪೇದೆಯೊಬ್ಬ ಜೀಪಿನಿಂದ ಒಂದು ಕಾಲನ್ನಷ್ಟೆ ಹೊರಗೆ ಹಾಕಿ ಕೇಳಿದ:

"ಇಲ್ಲಿ ಸರೋಜಮ್ಮ ಅಂದ್ರೆ ಯಾರು?''

"ಯಾವ ಸರೋಜಮ್ಮ? ಈ ಊರಾಗೆ ಹತ್ತು ಸರೋಜಮ್ಮ ಐದಾರೆ. ನಿಂಗೆ ಯಾರ್ಬೇಕಪ್ಪ?"

ಪೊಲೀಸು ಜೀಪಿನ ಒಳಗಿಂದ ಯಾರೋ ಹೇಳಿದರು:

"ಅದೇ ಅಮ್ಮಾ, ಅವಳ ಸೊಸೆ ಹೆಂಡಾ ಮಾರ್ತಾಳಲ್ಲ, ಬಾಯಿ ಜೋರು ಅಂತಲ್ಲ?''

"ನಾನೂ ಸರೋಜಮ್ಮನ ಸೊಸೇನೆ; ಆದ್ರೆ ಹೆಂಡಾಪಿಂಡಾ ಮರ್ರೋಳಲ್ಲ; ಜೀಪೊಳಗೇ ಕೂತ್ಗಂಡು ಯಾಕೆ ಕೇಳ್ತೀರಿ? ಮನೆ ಒಳಗೆಹೊರಗೆ ಹುಡ್ಕಿ ಹೋಗ್ರಿ. ಅದೇ ಕೆಲ್ಸಕ್ಕೆ ಬಂದೋರು ಅಲ್ಲೇ ನಿಂತ್ರೆ?"

ಪೇದೆಗಳು, ಇವರ ಮಾತಿನ ವರಸೆಯನ್ನು ನೋಡಿ, ಇದರಲ್ಲಿ ಇನ್ನೂ ಏನೋ ಹುನ್ನಾರು ಅಡಗಿರಬೇಕೆಂದು ಅನುಮಾನಿಸಿದರು; ಇಷ್ಟು ಮಾತನಾಡುವ ಇವರ ಮನೆಯಲ್ಲಿ ಸಾಕ್ಷಿಗಾಗಿ ಒಂದೇ ಒಂದು ಖಾಲಿ ಬಾಟಲಿಯೂ ಸಿಕ್ಕಲು ಸಾಧ್ಯವಿಲ್ಲ ಎಂದು ನಿರ್ಧರಿಸಿಬಿಟ್ಟರು. ಎರಡೂ ಜೀಪುಗಳು ಬಂದ ವೇಗದಲ್ಲಿಯೇ ಹೊರಟುಹೋದವು!

## ಅಲಕ ತೀರ್ಥಹಳ್ಳಿ

'ಅಲಕ ತೀರ್ಥಹಳ್ಳಿ' ಎಂದೇ ಚಿರಪರಿಚಿತರಾದ ಎಚ್.ವಿ. ಲಕ್ಷ್ಮೀನಾರಾಯಣ ಅವರು ಹುಟ್ಟಿದ್ದು ಸಾಗರ ಸಮೀಪಕದ ಹೊಗೊಪ್ಪಲು ಎಂಬ ಪುಟ್ಟ ಹಳ್ಳಿಯಲ್ಲಿ. ತೀರ್ಥಹಳ್ಳಿಯ ತುಂಗಾ ಮಹಾವಿದ್ಯಾಲಯದ ಇಂಗ್ಲಿಷ್ ಪ್ರಾಧ್ಯಾಪಕರಾಗಿ ನಿವೃತ್ತರು. 'ಈ ಕಥೆಗಳ ಸಹವಾಸವೇ ಸಾಕು' ಮತ್ತು 'ನವಿಲೆಸರ' ಅವರ ಕಥಾಸಂಗ್ರಹಗಳು. ಅನೇಕ ನಾಟಕಗಳನ್ನು, ಕವಿತೆಗಳನ್ನು ಬರೆದಿದ್ದಾರೆ. 'ಮುಂದೆ ಬರುವುದು ಮಹಾನವಮಿ' ಪ್ರಕಟಣೆಗೆ ಸಿದ್ಧವಾಗಿರುವ ಕಾದಂಬರಿ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.